4ನೇ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಸ್ಪೇಷಲ್ ನ್ಯಾಯಾಧೀಶರು
(ಪಿಸಿಎ) ಬೆಳಗಾವಿ ಇವರ ನ್ಯಾಯಾಲಯದಲ್ಲಿ
ಮುಕ್ಕಾಂಃ ಬೆಳಗಾವಿ.

ಎಸ್‌ಸಿ ಕೇಸ್ ನಂಃ 210/2022

ಫ್ರಾಸಾಃ 2

ಆ ಸಾಃ 3

ಸಾಕ್ಷಿಯ ಹೆಸರುಃ ಮಂಜುನಾಥ ಬಸಪ್ಪ ಬೋಗೂರ
ತಂದೆಯ ಹೆಸರುಃ ಬಸಪ್ಪ ಬೋಗೂರ
ವಯಸ್ಸುಃ 34 ವರ್ಷ
ಉದ್ಯೋಗಃ ವ್ಯವಸಾಯ.
ವಾಸ್ತವ್ಯಃ ಬೈಲೂರು

ದಿನಾಂಕಃ 03-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನನಗೆ ಚಾಸಾ-2 ಕುತುಬುಸಾಬ ಗೊತ್ತು. ಅವರು ಬೈಲೂರನವರು. ನನಗೆ ಚಾಸಾ-1 ಮಹೇಶ ಮರೇದ ಗೊತ್ತು, ಅವರೂ ಸಹ ಬೈಲೂರನವರು. ದಿನಾಂಕ 15.06.2020 ರಂದು ನಾನು ಮತ್ತು ಚಾಸಾ-2 ಕಿತ್ತೂರನಿಂದ ಬೈಲೂರ ಕಡೆಗೆ ಬರುತ್ತಿರುವಾಗ ಬಸರಕೋಡದಲ್ಲಿ ಮಾವಿನ ತೋಟದ ಹತ್ತಿರ ಇರುವ ಕಚ್ಚಾ ರಸ್ತೆಗೆ ನಮ್ಮನ್ನು ಪೊಲೀಸರು ಕರೆಸಿದ್ದರು. ಆ ಸ್ಥಳದಲ್ಲಿ ಪಂಚನಾಮೆ ಮಾಡುವುದು ಇದೆ ಎಂದು ನಮ್ಮನ್ನು ಕರೆಸಿದ್ದರು. ಆ ಸ್ಥಳದಲ್ಲಿ ಚಾಸಾ-1 ಮಹೇಶ ಮರೇದ ಇದ್ದು ಆ

ಸ್ಥಳದಲ್ಲಿ ದರೋಡೆ ಆಗಿದೆ ಎಂದು ಚಾಸಾ-1 ಮಹೇಶ ಸ್ಥಳವನ್ನು ತೋರಿಸಿದರು. ಚಾಸಾ-1 ಮಹೇಶ ಮತ್ತು ಆತನ ಅಕ್ಕ ಸೌಮ್ಯ ಅಲ್ಲಿ ಬರುತ್ತಿರುವಾಗ ಅವರಿಗೆ ಸೇರಿದ 2 ಮೋಬೈಲ ಫೋನ್ ಮತ್ತು ಚಿನ್ನದ ಚೈನನ್ನು ಯಾರೋ ಆರೋಪಿತರು ಕಿತ್ತುಕೊಂಡು ದರೋಡೆ ಮಾಡಿ ಹೋಗಿದ್ದಾರೆ ಎಂದು ಹೇಳಿ ಚಾಸಾ-1 ಮಹೇಶ ಮರೇದ ಈತನು ಸ್ಥಳ ತೋರಿಸಿದನು. ಚಾಸಾ-1 ಮಹೇಶ ತೋರಿಸಿದ ಸ್ಥಳದಲ್ಲಿ ಪೊಲೀಸರು ನನ್ನ ಮತ್ತು ಚಾಸಾ-2 ಕುತುಬುಸಾಬ ರವರ ಸಮಕ್ಷಮ ದಿನಾಂಕ 15.06.2020 ರಂದು ಮದ್ಯಾಹ್ಣ 3-30 ರಿಂದ 1-00 ಗಂಟೆ ಪಂಚನಾಮೆ ಮಾಡಿದರು. ಆಗ ನಾನು ಪಂಚನಾಮೆಗೆ ಸಹಿ ಹಾಕಿದೆನು. ಪಂಚನಾಮೆ ಕಾಲಕ್ಕೆ ಪೊಲೀಸರು ನಕ್ಷೆ ತಯಾರಿಸಿದರು. ಪಂಚನಾಮೆಯನ್ನು ನಮಗೆ ಓದಿ ಹೇಳಿದ ನಂತರ ನಾವು ಸಹಿ ಹಾಕಿದೇವು. ಪಂಚನಾಮೆ ಕಾಲಕ್ಕೆ ಪೊಲೀಸರು ಪೊಟೋಗಳನ್ನು ಸಹ ತೆಗೆದರು. ಅಲ್ಲಿ ಮಾಡಿದ ಪಂಚನಾಮೆಯನ್ನು ನಾನು ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-13 ಎಂದು ಗುರುತಿಸಲಾಗಿದೆ. ನಿಪಿ-13(ಬಿ) ನನ್ನ ಸಹಿ. ಅಲ್ಲಿ ತಯಾರಿಸಿದ ನಕಾಶೆಯನ್ನು ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-16 ಎಂದು ಗುರುತಿಸಲಾಗಿದೆ. ಅದರಲ್ಲಿ ಇರುವ ನನ್ನ ಸಹಿಯನ್ನು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-16(ಬಿ) ಎಂದು ಗುರುತಿಸಲಾಯಿತು. ಅಲ್ಲಿ ತೆಗೆದ ಪೊಟೋಗಳನ್ನು ಗುರುತಿಸಿದ್ದು ಆ ಪೊಟೋಗಳನ್ನು ಈಗಾಗಲೇ ನಿಪಿ-14 ಮತ್ತು 15 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ನಾನು ವ್ಯವಸಾಯ ಮಾಡುತ್ತೇನೆ. ನಮ್ಮ ಜಮೀನು ಬೈಲೂರನಲ್ಲಿ ಇದೆ . ನಾನು ಮತ್ತು ನನ್ನ ತಂದೆ ಆ ಜಮೀನಿನ ಕೆಲಸ ಮಾಡುತ್ತೇವೆ. ನಾವು ನಮ್ಮ ಜಮೀನಿನಲ್ಲಿ ಕೆಲಸ ಮಾಡಲು ಬೆಳಿಗ್ಗೆ ಹೋಗಿ ಸಾಯಂಕಾಲ ಬರುತ್ತೇವೆ. ನೀವು ಪಂಚನಾಮೆ ಕಾಲಕ್ಕೆ ಸ್ಟೇಷನರಿ ವ್ಯಾಪಾರ ಮಾಡುತ್ತೇವೆ ಎಂದು ಹೇಳಿಲ್ಲ ಎಂದರೆ ಸಾಕ್ಷಿಯು ಆಗ ನಾನು ಸ್ಟೇಷನರಿ ವ್ಯಾಪಾರ ಮಾಡುತ್ತಿದ್ದು, ಈಗ ಅಂಗಡಿ ಮುಚ್ಚಿದ್ದೇನೆ ಎನ್ನುತ್ತಾರೆ. ನನ್ನ ಸ್ಟೇಷನರಿ ಅಂಗಡಿ ಬೈಲೂರನಲ್ಲಿ ಇತ್ತು. ನಾನು ಅಂಗಡಿಯನ್ನು ಬೆಳಿಗ್ಗೆ 9 ರಿಂದ ರಾತ್ರಿ 8–00 ಗಂಟೆವರೆಗೆ ನಡೆಸುತ್ತಿದ್ದೇನು. ನನಗೆ ಪಂಚನಾಮೆಗೆ ಬರುವಂತೆ ಪೊಲೀಸರು ಕರೆಯಲು ಬಂದಿರಲಿಲ್ಲ. ದಿನಾಂಕ 15.06.2020 ರಂದು ನಾನು ಮತ್ತು ಚಾಸಾ–2 ಕಿತ್ತೂರಗೆ ಹೋಗಿದ್ದೇವು. ನಾವು ಆ ದಿನ ಕಿತ್ತೂರಗೆ ನಮ್ಮ ಕೆಲಸದ ನಿಮಿತ್ತ ಹೋಗಿದ್ದೇವು. ನಾನು ಮತ್ತು ಚಾಸಾ–2 ಕಿತ್ತೂರಗೆ ಹೋಗಿ ಬರುತ್ತಿದ್ದ ಬಗ್ಗೆ ನಿಪಿ–13 ಪಂಚನಾಮೆಯಲ್ಲಿ ನಮೂದು ಮಾಡಿಲ್ಲ ಎಂದರೆ ನಿಜ. ನಾನು ಬೆಳಿಗ್ಗೆ 9 ರಿಂದ ರಾತ್ರಿ 8 ಗಂಟೆವರೆಗೆ ಸ್ಟೇಷನರಿ ಅಂಗಡಿಯಲ್ಲಿ ಇರುವುದರಿಂದ ದಿನಾಂಕ 15.06.2020 ರಂದು ಮದ್ಯಾಹ್ನ 3–30 ಗಂಟೆಗೆ ಬಸರಕೋಡನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

ಚಾಸಾ–1 ಮಹೇಶ ಇವರು ಬೈಲೂರನವರು ಎಂದರೆ ನಿಜ. ನಾನು, ಚಾಸಾ–2, ಚಾಸಾ–1 ಎಲ್ಲರೂ ಸ್ನೇಹಿತರು ಎಂದರೆ ಸಾಕ್ಷಿಯು ಅವರೆಲ್ಲರೂ ಪರಿಚಯಸ್ಥರು

ಎನ್ನುತ್ತಾರೆ. ನನ್ನನ್ನು ಹಿಂದಿನ ಮುದ್ದತ್ತದಂದು ನ್ಯಾಯಾಲಯಕ್ಕೆ ಚಾಸಾ–1 ಮಹೇಶ ಕರೆದುಕೊಂಡು ಬಂದಿದ್ದರು ಎಂದರೆ ಸರಿಯಲ್ಲ. ಈ ದಿನ ಚಾಸಾ–1 ಮಹೇಶ ನ್ಯಾಯಾಲಯಕ್ಕೆ ಬಂದಿದ್ದಾರೆ ಎಂದರೆ ಸಾಕ್ಷಿಯು ಆತನು ನ್ಯಾಯಾಲಯಕ್ಕೆ ಬಂದಿರುವುದು ನಿಜ, ಆದರೆ ನಾನು ಪ್ರತ್ಯೇಕವಾಗಿ ನ್ಯಾಯಾಲಯಕ್ಕೆ ಬಂದಿದ್ದು ಅವರು ಪ್ರತ್ಯೇಕವಾಗಿ ಬಂದಿದ್ದಾರೆ ಎನ್ನುತ್ತಾರೆ. ಚಾಸಾ–1 ಮಹೇಶ ನನಗೆ ಇದೇ ರೀತಿ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಬೇಕು ಎಂದು ಹೇಳಿ ಕರೆದುಕೊಂಡು ಬಂದರು ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗಿದ್ದೇನೆ ಎಂದು ಹೇಳುವ ಮೊದಲು ಪೊಲೀಸರು ಪಂಚನಾಮೆ ಬರೆದು ಇಟ್ಟಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ನಮ್ಮ ಸಮಕ್ಷಮ ಪಂಚನಾಮೆ ಬರೆಯಲಾಯಿತು ಎನ್ನುತ್ತಾರೆ. ನೀವು ಪೊಲೀಸರಿಗೆ ಪಂಚನಾಮೆ ಇದೇ ರೀತಿ ಬರೆಯಿರಿ ಎಂದು ಹೇಳಿದ್ದೀರಿ ಎಂದರೆ ಸಾಕ್ಷಿಯು ಮಹೇಶ ಅಲ್ಲಿ ನಡೆದ ಘಟನೆಯು ಬಗ್ಗೆ ಹೇಳಿದ್ದು ಅದರಂತೆಯೇ ನಾವು ಪೊಲೀಸರಿಗೆ ಪಂಚನಾಮೆ ಬರೆಯುವ ಕಾಲಕ್ಕೆ ಹೇಳಿದ್ದೇವು ಎನ್ನುತ್ತಾರೆ. ಪೊಲೀಸರಿಗೆ ನಾವು ಇದೇ ರೀತಿ ಪಂಚನಾಮೆ ಬರೆಯಿರಿ ಎಂದು ಹೇಳಿಲ್ಲ. ಮಾವಿನ ತೋಟ ಇರುವ ಜಮೀನು ಯಾರದು ಎಂದು ನನಗೆ ಗೊತ್ತಿರುವುದಿಲ್ಲ. ಪಂಚನಾಮೆ ಮಾಡಿದ ಸ್ಥಳದ ಚಕಬಂದಿ ನಿಮಗೆ ಹೇಳಲಾಗುವುದಿಲ್ಲ ಎಂದರೆ ಸಾಕ್ಷಿಯು ಚಕಬಂದಿ ಹೇಳಲಾಗುವುದಿಲ್ಲ ಆದರೆ ಸ್ಥಳದಲ್ಲಿ ನಕಾಶೆ ತಯಾರಿಸಲಾಗಿತ್ತು ಎನ್ನುತ್ತಾರೆ. ನಿಪಿ–16 ನಕಾಶೆಯನ್ನು ಪೊಲೀಸರು ತಯಾರಿಸಿದರು, ಅದನ್ನು ತಯಾರಿಸಿದ ಪೊಲೀಸರ ಹೆಸಲು ನನಗೆ

ಗೊತ್ತಿಲ್ಲ.

ನಾವು ಪಂಚನಾಮೆ ಕಾಲಕ್ಕೆ ನಾನು, ಚಾಸಾ–2 ಕುತುಬಸಾಬ, ಚಾಸಾ–1 ಮಹೇಶ, ಇಬ್ಬರು ಪೊಲೀಸರು ಮತ್ತು ಒಬ್ಬ ಪೊಟೋಗ್ರಾಫರ ಹೀಗೆ ಒಟ್ಟು 7 ಜನ ಪಂಚನಾಮೆ ಕಾಲಕ್ಕೆ ಅಲ್ಲಿ ಇದ್ದೇವು. ನಿಪಿ–14 ಮತ್ತು 15 ರಲ್ಲಿ 5 ಜನರು ಮಾತ್ರ ಕಾಣುತ್ತಾರೆ ಎಂದರೆ ನಿಜ. ಆ ಸ್ಥಳದಲ್ಲಿ ಪೊಲೀಸರು ಪೊಟೋ ತೆಗೆಯುವುದು ಇದೆ ನಿಲ್ಲುವಂತೆ ಹೇಳಿದ್ದರಿಂದ ನಾವು ನಿಂತೆವು ಎಂದರೆ ನಿಜ. ನಾನು ಮತ್ತು ಚಾಸಾ–2 ರವರು ಕಿತ್ತೂರಗೆ ಮೋಟಾರ ಸೈಕಲನಲ್ಲಿ ಹೋಗಿದ್ದೇವು. ನಿಪಿ–14 ಮತ್ತು 15 ಪೊಟೋದಲ್ಲಿ ನಮ್ಮ ಮೋಟಾರ ಸೈಕಲ ಕಾಣುವುದಿಲ್ಲ ಎಂದರೆ ನಿಜ, ಸಾಕ್ಷಿ ನಾವು ಮುಂದೆ ಹಚ್ಚಿ ದ್ದೇವು ಎನ್ನುತ್ತಾರೆ. ನಾನು ಮತ್ತು ಚಾಸಾ–2 ರವರು ಮೋಟಾರ ಸೈಕಲನಲ್ಲಿ ಕಿತ್ತೂರಗೆ ಹೋಗಿ ಬರುತ್ತಿರುವಾಗ ಪೊಲೀಸರು ಪಂಚನಾಮೆ ಮಾಡುವುದು ಇದೆ ಎಂದು ನಮ್ಮನ್ನು ಕರೆದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ–1 ಮಹೇಶ ನಮಗೆ ಸ್ಥಳ ತೋರಿಸಿ ಆ ಸ್ಥಳದಲ್ಲಿ ಆತ ಮತ್ತು ಆತನ ಅಕ್ಕ ಬರುತ್ತಿರುವಾಗ ಯಾರೋ ಆರೋಪಿತರು ಅವರ 2 ಮೋಬೈಲ ಪೋನ್ ಮತ್ತು ಬಂಗಾರದ ಚೈನನ್ನು ಕಿತ್ತುಕೊಂಡು ದರೋಡೆ ಮಾಡಿದರು ಎಂದು ನಮಗೆ ತಿಳಿಸಿದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇವೆ ಎಂದರೆ ಸರಿಯಲ್ಲ. ಪಿರ್ಯಾದಿದಾರರ ಒಂದು ಮೋಬೈಲ್ ಪೋನ್ ರೆಡ್ ಮೀ ಕಂಪನಿಯದ್ದು ಇದ್ದು, ಇನ್ನೊಂದು ಮೋಬೈಲ ಯಾವ ಕಂಪನಿಯದ್ದು ಎಂದು ಗೊತ್ತಿರುವುದಿಲ್ಲ. ಮೋಬೈಲ

ಫೋನ್ ಯಾವ ಕಂಪನಿಯದ್ದು ಎಂದು ಪಂಚನಾಮೆಯಲ್ಲಿ ನಮೂದು ಮಾಡಲಾಗಿದೆ. ಕಿತ್ತೂರ ಬೀಡಿ ರಸ್ತೆಯಲ್ಲಿ ತುಂಬಾ ವಾಹನಗಳು ಓಡಾಡುತ್ತಿರುತ್ತವೆ ಎಂದರೆ ನಿಜ. ಕಿತ್ತೂರ ಬೀಡಿ ರಸ್ತೆಯ ಅಕ್ಕಪಕ್ಕ ಕಾಡುಗಳು ಇವೆ ಎಂದರೆ ಸಾಕ್ಷಿಯು ತೋಟಗಳು ಇವೆ ಆದರೆ ಅಷ್ಟೇನೂ ಕಾಡುಗಳು ಇಲ್ಲ ಎನ್ನುತ್ತಾರೆ. ಕಿತ್ತೂರ ಬೀಡಿ ರಸ್ತೆಯಲ್ಲಿ ಬೆಳಗ್ಗಿನ ಸಮಯದಲ್ಲಿ ಸಾಕಷ್ಟು ಬಸ್ಸುಗಳು, ಇತರ ವಾಹನಗಳು ಓಡಾಡುತ್ತಿರುತ್ತವೆ ಎಂದರೆ ನಿಜ. ಘಟನೆಗೆ ಸಂಬಂಧಪಟ್ಟಂತೆ ಮತ್ತು ಪಂಚನಾಮೆಗೆ ಸಂಬಂಧಪಟ್ಟಂತೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ನಿಜ. ಚಾಸಾ–1 ಮಹೇಶ ಈತನು ನಮ್ಮ ಊರಿನವರಾಗಿದ್ದರಿಂದ ಆತನ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಪಂಚನಾಮೆಗೆ ಸಹಿ ಹಾಕು ಎಂದು ಹೇಳಿದ ಕಾರಣ ನಾನು ನಿಪಿ–13 ಪಂಚನಾಮೆಗೆ ಸಹಿ ಹಾಕಿದೆನು ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೆ ಸರಿ ಅದೆ**

**4ನೇ ಅಧಿಕ ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರು (ಪಿಸಿಎ) ಬೆಳಗಾವಿ.**